ಶ್ರೀ ಎಚ್. ಡಿ. ದೇವೇಗೌಡ.—ಇಂಜಿನೀಯರಿಂಗ್ ಇಲಾಖೆಯವರು ಹೋಗಿ ನೋಡಿಕೊಂಡು ಬಂದಿರುತ್ತಾರೆ, ಹೊಸ ಸೇತುವೆಯ ನಿರ್ಮಾಣ ಕಾರ್ಯಕ್ಕೆ ಮಂಜೂರಾತಿಯನ್ನು ಪಡೆದು ಕೆಲಸ ಮುಗಿಸುವವರೆಗೂ ಹಳೆ ಸೇತುವೆ ಬೀಳದಂತೆ ನೋಡಿಕೊಳ್ಳುತ್ತೇವೆ.

ವಿಷಯ.—ವಿಜಾಪುರ ಜಿಲ್ಲೆಯ ಮುಧೋಳ ತಾಲ್ಲೂಕಿನ ಮಂದ್ಡಾಪುರ ಬ್ಯಾರೇಜ ಕುರಿತಾಗಿ.

೧೯೩. ಶ್ರೀ ಅಶೋಕ್ ಕೆ. ಕಟ್ಟೀಮನಿ (ಮುಧೋಳ್).—ಮಾನ್ಯ ಸಣ್ಣ ನೀರಾವರಿಯ ರಾಜ್ಯ ಸಚಿವರು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ವಿಜಾಪುರ ಜಿಲ್ಲಾ ಮುಧೋಳ ತಾಲ್ಲೂಕಿನಲ್ಲಿ ಘಟಪ್ರಭಾ ನದಿಗೆ ಅಡ್ಡಲಾಗಿ ಕಟ್ಟುತ್ತಿರುವ ಮುದ್ಡಾಪುರ ಬ್ಯಾರೇಜಿನ ಕೆಲಸವು ಕಳೆದ ಎರಡು ವರುಷಗಳಿಂದ ನಿಂತಿದೆಯೇ ?

ಆ) ಹಾಗಿದ್ದರೆ ಇದಕ್ಕೆ ಕಾರಣಗಳೇನು ?

ಇ) ಈ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿಯ ರಾಜ್ಯ ಸಚಿವರು).—

ಅ) ಹೌದು.

ಆ) (೧) ಹಿಡಕಲ್ ಜಲಾಶಯದ ನಿರ್ಮಾಣ ಮತ್ತು ಘಟಪ್ರಭಾ ಎಡದಂಡೆ ನಾಲೆಯಂ ನೀರಾವರಿಯಿಂದ ಅಭಿವೃದ್ಧಿಯಾದ ಹಿಂಗಾರು ಬೆಳೆಯ ಪ್ರದೇಶಗಳಿಂದಾಗಿ ಘಟಪ್ರಭಾ ನದಿಯಲ್ಲಿ ನೀರು ಹರಿಯುವ ಪ್ರಮಾಣವು ೧೯೭೬ನೇ ಇಸ್ವಿಯಿಂದ ಹೆಚ್ಚಾಗಿರುತ್ತದೆ. ಈ ಕಾರಣದಿಂದಾಗಿ ಕೆಲಸ ಮಾಡುವ ಅವಧಿಯ ಕಾಲವು ಗಣನೀಯವಾಗಿ ಕಡಿಮೆಯಾಗಿದೆ.

(೨) ೧೯೭೫ನೇ ಇಸ್ವಿಯಲ್ಲಿ ಇದ್ದ ನದಿಯ ಪ್ರವಾಹವನ್ನು ಅನುಸರಿಸಿ ತನ್ನ ಟೆಂಡರ್ ರೇಟುಗಳನ್ನು ಈ ಕೆಲಸಕ್ಕೆ ಕೊಟ್ಟಿದ್ದಾಗಿಯೂ ಮತ್ತು ಈಗಿನ ಹೆಚ್ಚಿದ ನದಿಯ ಪ್ರವಾಹಕ್ಕೆ ಈ ರೇಟು ಅನ್ವಯವಾಗುವುದಿಲ್ಲವೆಂದು ಏಕೆಂದರೆ ನೀರನ್ನು ಮಾರ್ಗಾಂತರಿಸುವ ಕೆಲಸಕ್ಕೆ ತಗಲುವ ಖರ್ಚು ಹೆಚ್ಚಾಗುವುದು ಎಂದು ಗುತ್ತಿಗೆದಾರನು ತಿಳಿಸಿರುತ್ತಾನೆ. ಮತ್ತು ಇದಕ್ಕೋಸ್ಕರ ಕೆಲಸವನ್ನು ನಿಲ್ಲಿಸಿರುತ್ತಾನೆ. ಈ ಕಾರಣಗಳಿಂದ ಕೆಲಸವು ಸ್ಥಗಿತವಾಗಿದೆ.

ಇ) ಈ ಕೆಲಸವನ್ನು ಜೂನ್ ೧೯೮೬ರೊಳಗಾಗಿ ಪೂರ್ಣಗೊಳಿಸಲಾಗುವುದು.

ಶ್ರೀ ಅಶೋಕ್ ಕೆ. ಕಟ್ಟೀಮನಿ.—ಮಾನ್ಯ ಅಧ್ಯಕ್ಷರೇ ಕಂಟ್ರಾಕ್ಟರಿಗೂ ಟೆಂಡರ್‌ಗೂ ಸಂಬಂಧ ಪಟ್ಟ ಹಾಗೆ ವ್ಯಾಜ್ಯ ಕಳೆದ ಎರಡು ವರ್ಷಗಳಿಂದಲೂ ಇರುವುದರಿಂದ ಅಲ್ಲಿ ಕೆಲಸ ನಿಂತುಹೋಗಿರುತ್ತದೆ. ಆದ್ದರಿಂದ ಕಂಟ್ರಾಕ್ಟರನ್ನು ಕರೆಸಿ ವ್ಯಾಜ್ಯವನ್ನು ಇತ್ಯರ್ಥ ಮಾಡಿ ಕೆಲಸ ಜರೂರು ಮಾಡಿಸಬೇಕು. ಮತ್ತು ಈ ಕೆಲಸವನ್ನು ಎಷ್ಟು ದಿವಸಗಳಲ್ಲಿ ಪ್ರಾರಂಭ ಮಾಡುತ್ತೀರಿ ಎಂಬುದನ್ನು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಮಾನ್ಯ ಸಭಾಧ್ಯಕ್ಷರೇ, ಮೊದಲು ಕಂಟ್ರಾಕ್ಟ್ ಕೊಟ್ಟಿದ್ದಕ್ಕೂ ಈವತ್ತಿನ ಪರಿಸ್ಥಿತಿಗೂ ಬದಲಾವಣೆಯಾಗಿದೆ.

ಶ್ರೀ ಅಶೋಕ್ ಕೆ. ಕಟ್ಟೀಮನಿ.—ಮೊದಲು ವ್ಯಾಜ್ಯವನ್ನು ಸೆಟಲ್ ಮಾಡಿ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಮಾನ್ಯ ಅಧ್ಯಕ್ಷರೇ, ನೀರನ್ನು ಮಾರ್ಗಾಂತರಿಸುವ ಕೆಲಸ ಸರ್ಕಾರದ ವತಿಯಿಂದ ಮಾಡಿಸುತ್ತಿದ್ದಾರೆ. ನೀರು ಕಡಿಮೆಯಾದರೆ ೧೯೮೬ನೇ ಇಸವಿಯೊಳಗೆ ಪೂರ್ಣಗೊಳಿಸಲಾಗುತ್ತದೆ. ಮತ್ತೆ ಅದೇ ಗುತ್ತಿಗೆದಾರನು ಹಿಂದಿನ ಟೆಂಡರ್ ರೇಟ್‌ನಲ್ಲಿಯೇ ಕೆಲಸ ಮಾಡಿ ಮುಗಿಸಿಕೊಡುವುದಾಗಿಯೂ ಕೂಡ ಒಪ್ಪಿರುತ್ತಾನೆ.

ವಿಷಯ : ಬೀದರ್ ಜಿಲ್ಲೆಯ ಲೋಕೋಪಯೋಗಿ ಇಲಾಖಾ ರಸ್ತೆಗಳ ದುರಸ್ತಿ ಬಗ್ಗೆ.

೧೯೪ ಶ್ರೀ ಬಸವರಾಜ ಪಾಟೀಲ್ (ಹುಮ್ನಾಬಾದ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು) ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಬೀದರ್ ಜಿಲ್ಲೆಯಲ್ಲಿರುವ ಲೋಕೋಪಯೋಗಿ ಇಲಾಖೆಯ ಎಲ್ಲಾ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಒಂದು ತಾಲ್ಲೂಕಿನ ಮುಖ್ಯ ಸ್ಥಳದಿಂದ ಮತ್ತೊಂದು ತಾಲ್ಲೂಕಿನ ಮುಖ್ಯ ಸ್ಥಳಕ್ಕೆ ಹಾಗೂ ಎಲ್ಲ ತಾಲ್ಲೂಕುಗಳ ಮುಖ್ಯ ಸ್ಥಳಗಳಿಂದ ಜಿಲ್ಲೆಯ ಮುಖ್ಯ ಸ್ಥಳವನ್ನು ಸಂಪರ್ಕಿಸುವ ರಸ್ತೆಯ ಸ್ಥಿತಿ ಹೇಗಿದೆ ಎಂಬುದು ಸರ್ಕಾರದವರು ಗಮನಿಸಿದ್ದಾರೆಯೇ :

(ಇ) ಹಾಗಿದ್ದಲ್ಲಿ, ಆ ರಸ್ತೆಗಳ ತೀವ್ರ ದುರಸ್ತಿಗಾಗಿ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ;

(ಈ) ಆ ಕ್ರಮಗಳನ್ನು ಎಂದಿನಿಂದ ಜಾರಿಗೊಳಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—

(ಅ) ಇಲ್ಲಾ, ಬೀದರ್ ಜಿಲ್ಲೆಯ ಕೆಲವು ಲೋಕೋಪಯೋಗಿ ಇಲಾಖಾ ರಸ್ತೆಗಳು ಮಾತ್ರ ತೃಪ್ತಿಕರವಾಗಿಲ್ಲ.

(ಆ) ಒಟ್ಟು ೬ ರಸ್ತೆಗಳ ಪೈಕಿ ೪ ರಸ್ತೆಗಳು ಸುಸ್ಥಿತಿಯಲ್ಲಿವೆ. ಉಳಿದ ಎರಡು ರಸ್ತೆಗಳ ಸ್ಥಿತಿ ಅಷ್ಟೇನು ತೃಪ್ತಿಕರವಾಗಿಲ್ಲ. ತಾಲ್ಲೂಕು ಮುಖ್ಯ ಸ್ಥಳಗಳಿಂದ ಜಿಲ್ಲಾ ಮುಖ್ಯ ಸ್ಥಳವನ್ನು ಸಂಪರ್ಕಿಸುವ ೪ ರಸ್ತೆಗಳು ಸುಸ್ಥಿತಿಯಲ್ಲಿವೆ.

(ಇ) ಬಾಲ್ಕಿ–ಬಸವಕಲ್ಯಾಣ ರಸ್ತೆ ಮತ್ತು ಬಾಲ್ಕಿ–ಹುಮನಾಬಾದ್ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಸದ್ಯದಲ್ಲೇ ಅನುಕ್ರಮವಾಗಿ ೨೪.೪೦ ಲಕ್ಷ ರೂ. ಗಳ ಮತ್ತು ೫.೦೦ ಲಕ್ಷ ರೂ. ಗಳ ಅಂದಾಜಿನಲ್ಲಿ ತೆಗೆದುಕೊಳ್ಳಲಾಗುವುದು.

(ಈ) 'ಇ' ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ಹುಲಸೂರು ಮಾರ್ಗವಾಗಿ ಹೋಗುವ ಕಲ್ಯಾಣ್ಯೆ–ಭಾಲ್ಕಿ ಮತ್ತು ಹುಮನಾಬಾದ್–ಭಾಲ್ಕಿ ರಸ್ತೆಗಳ ಸ್ಥಿತಿಗಳ ಬಗ್ಗೆ.

೨೦೪ ಶ್ರೀ ರಾಮಚಂದ್ರ ವೀರಪ್ಪ (ಹುಲಸೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು. ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಕಲ್ಯಾಣಿಯಿಂದ ಭಾಲ್ಕಿಗೆ ಹುಲಸೂರು ಮಾರ್ಗವಾಗಿ ಹೋಗುವ ರಸ್ತೆಯು ಸುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಆ ರಸ್ತೆಯನ್ನು ದುರಸ್ತಿಗೊಳಿಸಲು ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದೆ ?

(ಇ) ಭಾಲ್ಕಿಯಿಂದ ಹುಮನಾಬಾದ್‌ಗೆ ಮದಂಬಲಗುಂಡಿ ಮಾರ್ಗವಾಗಿ ಹೋಗುವ ರಸ್ತೆಯು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಈ) ಹಾಗಿದ್ದಲ್ಲಿ ಆ ರಸ್ತೆಯನ್ನು ಸುಧಾರಣೆಗೊಳಿಸಲು ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

(ಅ) ನಿಜವಲ್ಲಾ, ರಸ್ತೆಯ ಕೆಲವು ಭಾಗಗಳ ಸ್ಥಿತಿ ಮಾತ್ರ ತೃಪ್ತಿಕರವಾಗಿಲ್ಲ.

(ಆ) ಈ ರಸ್ತೆಯು ಸುಧಾರಣೆಯ ಕಾಮಗಾರಿಯನ್ನು ಆರ್ಥಿಕ ಪರಿಸ್ಥಿತಿಗನುಗುಣವಾಗಿ ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.

(ಇ) ನಿಜವಲ್ಲಾ, ರಸ್ತೆಯ ಕೆಲವು ಭಾಗಗಳ ಸ್ಥಿತಿ ಮಾತ್ರ ತೃಪ್ತಿಕರವಾಗಿಲ್ಲ.

(ಈ) ಈ ರಸ್ತೆಯು ೭/೦ ರಿಂದ ೧೬/೦ ಕಿ. ಮೀ. ವರೆಗಿನ ಭಾಗವನ್ನು ೫.೦೦ ಲಕ್ಷ ರೂ. ಗಳ ಅಂದಾಜಿನಲ್ಲಿ ಸಧ್ಯದಲ್ಲಿ ತೆಗೆದುಕೊಳ್ಳಲಾಗುವುದು.

೨೦೦ (೧೧೧) ಮತ್ತು ಪ್ರ. ನಂ. ೧೯೪ ? (೮೩) ಎರಡನ್ನೂ ಒಟ್ಟಿಗೆ ಕೇಳಿದ್ದೀರಿ. ಆದ್ದರಿಂದ ಎರಡಕ್ಕೂ ಒಟ್ಟಿಗೆ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ ಸರ್ಕಾರಕ್ಕೆ ಗೊತ್ತು, ಮತ್ತು ಮಾನ್ಯ ದೇವೇಗೌಡರಿಗೂ ಗೊತ್ತು. ಇದು ಇಂಬ್ಯಾಲೆನ್ಸ್ ಆಗಿ ಬಹಳ ದಿವಸಗಳಿಂದಲೂ ನಡೆದುಕೆ ಂಡು ಬಂದಿರುತ್ತದೆ. ಬೀದರ್ ಜಿಲ್ಲೆಯಲ್ಲಿ ಒಂದು ರೋಡು ಕೂಡ ಸರಿಯಿಲ್ಲ. ನಾವು ವಿಲೇಜ್-ಟು-ವಿಲೇಜ ಕೇಳುತ್ತಿದ್ದೇವೆ. ಒಂದು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗೂ ಮತ್ತೊಂದು ತಾಲೂಕ್ ಹೆಡ್‌ಕ್ವಾರ್ಟರ್ಸ್‌ಗೂ ಆರು ಎಂ.ಎಲ್.ಎ ಗಳು ಇದ್ದು ಪ್ರಶ್ನೆ ಹಾಕಿದರೂ ಅದೇ ಉತ್ತರ ಆದ್ದರಿಂದ ನಾನು ಕೇಳುತ್ತಿರುವುದು ಇಷ್ಟೆ. ಬಸವಕಲ್ಯಾಣದಿಂದ ಬಾಲ್ಕಿಗೆ ೨೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. ಈ ವರ್ಷ ಎಷ್ಟು ಹಣವನ್ನು ಖರ್ಚುಮಾಡಲಿಕ್ಕೆ ಇಟ್ಟಿದ್ದೀರಿ ? ಎರಡನೆಯದಾಗಿ ಹುಮ್ನಾಬಾದ್‌ನಿಂದ ಬಾಲ್ಕಿಗೆ ರೋಡ್ ಸಲುವಾಗಿ ೨೪ ಲಕ್ಷ ರೂಪಾಯಿ ಎಸ್ಟಿಮೇಟ್ ಇದ್ದರೂ ೫ ಲಕ್ಷ ರೂಪಾಯಿಗಳನ್ನು ಮಾತ್ರ ತಾವು ಇಟ್ಟಿದ್ದೀರಿ. ಇದನ್ನು ಯಾವಾಗ ಪೂರ್ತಿ ಮಾಡುತ್ತೀರೆಂದು ತಿಳಿಸಬೇಕು,

ಶ್ರೀ ಎಚ್.ಡಿ. ದೇವೇಗೌಡ.—ಈಗ ತಮಗೆ ಗೊತ್ತಿರುವಂತೆ ಮಾನ್ಯ ವೀರಪ್ಪಮೊಯ್ಲಿ ಅವರ ಕಾಲದಲ್ಲಿ ಯಾವುದೇ ರಸ್ತೆ ಕೆಲಸ ತೆಗೆದುಕೊಂಡರೆ ೩ ವರ್ಷ ಮತ್ತು ಸೇತುವೆ ಕೆಲಸ ತೆಗೆದುಕೊಂಡರೆ ೩-೪ ವರ್ಷಗಳಲ್ಲಿ ಮುಗಿಸಬೇಕೆಂದು ಆರ್ಥಿಕ ಇಲಾಖೆಯವರು ಕೆಲವು ನಿಯಮಗಳನ್ನು ಮಾಡಿದ್ದಾರೆ. ಅದರ ಪ್ರಕಾರ ಈ ೨೪ ಲಕ್ಷ ರೂಪಾಯಿಗಳ ಕೆಲಸವನ್ನು ಆರ್ಥಿಕ ಇಲಾಖೆಯವರು ಕೊಟ್ಟಿರುವಂತಹ ದಿಕ್ಕೂಚಿಯ ಆಧಾರದ ಮೇಲೆ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತೆ ಉತ್ತರದಲ್ಲಿ ಹೇಳಿರುವ ೫ ಲಕ್ಷ ರೂಪಾಯಿಗಳ ಕೆಲಸವನ್ನು ಸಹ ೧೯೮೩-೮೪ನೇ ಸಾಲಿನಲ್ಲಿ ತೆಗೆದುಕೊಳ್ಳುವಂತೆ ನಮ್ಮ ಅಧಿಕಾರಿಗಳಿಗೆ ಹೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಹೈದರಾಬಾದ್ ಮತ್ತು ಮಹಾರಾಷ್ಟ್ರದ ಭಾಗಗಳಲ್ಲಿ ರಸ್ತೆಗಳು ಯಾವ ರೀತಿ ಇವೆಯೋ ಆದೇರೀತಿಯಲ್ಲಿ ನಮ್ಮ ಬೀದರ್ ಜಿಲ್ಲೆಯ ರಸ್ತೆಗಳನ್ನು ಸಹ ಸರಿಪಡಿಸ ಬೇಕೆಂದು ಹೇಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಸದಸ್ಯರು ಈ ಸದನದಲ್ಲಿ ಬೀದರ್ ಜಿಲ್ಲೆಯ ರಸ್ತೆಗಳ ಬಗ್ಗೆ ಅನೇಕ ಸಲ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಅಪರ ತೀವ್ರತೆ ಬಹಳವಾಗಿದ್ದರೂ ಸಹ ನಮ್ಮ ಒಂದು ಸಂಪನ್ಮೂಲಗಳ ಕೊರತೆಯಿಂದ ಎಲ್ಲವನ್ನೂ ಒಂದೇ ಸಲ ಮಾಡುವುದು ಕಷ್ಟವಾಗಿದೆ. ಆದರೂ ಸಹ ಎಷ್ಟು ಸಾಧ್ಯವಾಗುತ್ತದೋ ಅಷ್ಟೂ ಕೆಲಸಗಳನ್ನು ನಾವು ಮಾಡುತ್ತೇವೆ.

ಕಾಮಗಾರಿ ಇಲಾಖೆಯಲ್ಲಿ ನೌಕರರಿಗೆ ಬಡ್ತಿ

೧೯೫ ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಜನವರಿ ೧೯೮೩ ರಿಂದ ಮಾರ್ಚಿ ತಿಂಗಳವರೆವಿಗೆ ಕಾಮಗಾರಿ ಇಲಾಖೆಯಲ್ಲಿ ಎಷ್ಟು ನೌಕರರಿಗೆ ಬಡ್ತಿ ನೀಡಲಾಗಿದೆ.

(ಆ) ಯಾವ್ಯಾವ ಹುದ್ದೆಗೆ ಯಾರ್ಯಾರಿಗೆ ಬಡ್ತಿ ನೀಡಲಾಗಿದೆ.

(ಇ) ಈ ಬಡ್ತಿ ಪಟ್ಟಿಯನ್ನು ಹಿಂದಿನ ಸರ್ಕಾರವೇ ಮಾಡಿರುವುದು ನಿಜವೆ ?